# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ–2878/2016/ಡಿಆರ್‌ಇ–1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 16/2/2018
19

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ಆರ್.ಆದಿನಾರಾಯಣಪ್ಪ, ಬಿಲ್ ಕಲೆಕ್ಟರ್ (ತತ್ಕಾಲಿಕ), ಡಿ.ಪಾಳ್ಯ ಗ್ರಾಮ ಪಂಚಾಯಿತಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, ಇವರ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

ಮಾನ್ಯ ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಚಿಕ್ಕಬಳ್ಳಾಪುರ ಲೋಕಾಯುಕ್ತ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಶ್ರೀ.ಆರ್.ಆದಿನಾರಾಯಣಪ್ಪ, ಬಿಲ್ ಕಲೆಕ್ಟರ್ (ತತ್ಕಾಲಿಕ), ಡಿ.ಪಾಳ್ಯ ಗ್ರಾಮ ಪಂಚಾಯಿತಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು ದೂರುದಾರರಾದ ಶ್ರೀ.ಲತೀಫ್‌ಉಲ್ಲಾ, ಡಿ.ಪಾಳ್ಯ ಗ್ರಾಮ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ದುರ್ನಡತೆ ತೋರಿಸಿದ್ದಾರೆ ಎಂದು ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿದಾಗ, ಎದುರುದಾರರು ದುರ್ನಡತೆ ತೋರಿಸಿದ್ದಾರೆ ಎಂದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ತನಿಖೆ ಕೈಗೊಂಡಿರುತ್ತದೆ.

**2) ಆಪಾದನೆಯ ಸಂಕ್ಷಿಪ್ತ ಸಾರಾಂಶ :-**

ಎ) ದೂರುದಾರರ ಪತ್ನಿ ಶ್ರೀಮತಿ.ನೂರ್‌ಜಾನ್ ಇವರಿಗೆ 2013–14ನೇ ಸಾಲಿನಲ್ಲಿ ಇಂದಿರಾ ಆವಾಜ್ ವಸತಿ ಯೋಜನೆಯಲ್ಲಿ ಗ್ರಾಮಪಂಚಾಯಿತಿ ಕಚೇರಿಯಿಂದ ಒಂದು ಮನೆ ಮಂಜೂರಾಗಿದ್ದು, ಮನೆಗೆ ಪಾಯ ಹಾಕಿ ಲಿಂಟ್ಲ್ ಹಂತದವರೆಗೆ ಮನೆ ಕಟ್ಟಿದ್ದು, ಅವರ ಪತ್ನಿಯ ಬ್ಯಾಂಕ್ ಖಾತೆಗೆ ಪಂಚಾಯಿತಿ ವತಿಯಿಂದ ರೂ.29,000/- ಗಳ ಮೊದಲನೇ ಬಿಲ್ಲು ಜಮೆಯಾಗಿದ್ದು, ದಿ.15/4/2014 ರಂದು

ಅನಾರೋಗ್ಯದ ನಿಮಿತ್ತ ದೂರುದಾರರ ಪತ್ನಿ ಮೃತಪಟ್ಟಿದ್ದರಿಂದ, ತನ್ನ ಪತ್ನಿಯ ಹೆಸರಿನಲ್ಲಿದ್ದ ದಾಖಲೆಗಳನ್ನು ತನ್ನ ಹೆಸರಿಗೆ ಬದಲಾವಣೆ ಮಾಡಿ ಮುಂದಿನ ಬಿಲ್ಲುಗಳನ್ನು ತನ್ನ ಹೆಸರಿಗೆ ಮಂಜೂರು ಮಾಡಿಕೊಡಬೇಕೆಂದು ದಿ.25/9/2014 ರಂದು ಡಿ.ಪಾಳ್ಯ ಗ್ರಾಮಪಂಚಾಯಿತಿಯ ಅಧ್ಯಕ್ಷರು/ಪಿ.ಡಿ.ಓ ರವರ ಹೆಸರಿಗೆ ಅರ್ಜಿ ಬರೆದು ಎದುರುದಾರರಿಗೆ ನೀಡಿರುತ್ತಾರೆ. ನಂತರ ದೂರುದಾರರಿಂದ ಎಲ್ಲಾ ದಾಖಲೆಗಳನ್ನು ತರಿಸಿಕೊಂಡು, ದೂರುದಾರರ ಪತ್ನಿಯ ಹೆಸರಿನಲ್ಲಿದ್ದ ಯಾವುದೇ ದಾಖಲೆಗಳನ್ನು ದೂರುದಾರರ ಹೆಸರಿಗೆ ಬದಲಾವಣೆ ಮಾಡಿಸಿಕೊಟ್ಟಿರುವುದಿಲ್ಲ. ಈ ಬಗ್ಗೆ ದೂರುದಾರರು ಎದುರುದಾರರನ್ನು ವಿಚಾರಿಸಿದಾಗ, ರೂ.3,000/- ಕೊಟ್ಟರೆ ಕೆಲಸ ಮಾಡಿಕೊಡುವುದಾಗಿ ಲಂಚದ ಹಣಕ್ಕೆ ಒತ್ತಾಯಿಸಿರುತ್ತಾರೆ.

ಬಿ) ದಿ.20/9/2015 ರಂದು ದೂರುದಾರರು ಹಾಗೂ ಬುರಾನ್‌ಖಾನ್ ಎಂಬುವರು ಎದುರುದಾರರೊಂದಿಗೆ ಮಾತನಾಡಿದ್ದು, ಅಗ ರೂ.3,000/- ಗಳ ಲಂಚದ ಹಣಕ್ಕೆ ಒತ್ತಾಯಿಸಿದ್ದನ್ನು ದೂರುದಾರರು ಲೋಕಾಯುಕ್ತ ಕಚೇರಿಯಿಂದ ಪಡೆದಿದ್ದ ವಾಯ್ಸ್ ರೆಕಾರ್ಡರ್‌ನಲ್ಲಿ ಧ್ವನಿಮುದ್ರಿಸಿಕೊಂಡಿರುತ್ತಾರೆ.

ಸಿ) ದಿ.21/9/2015 ರಂದು ಬುರಾನ್‌ಖಾನ್ ಎಂಬುವರು ಎದುರುದಾರರ ಬಳಿ ದೂರುದಾರರು ನೀಡಿದ್ದ ಎಲ್ಲಾ ದಾಖಲೆಗಳನ್ನು ಜೆರಾಕ್ಸ್ ಮಾಡಿಕೊಳ್ಳುವ ಸಲುವಾಗಿ ತೆಗೆದುಕೊಂಡು ಹೋಗಿದ್ದು, ದಿ.22/9/2015 ರಂದು ಕಡತವನ್ನು ತಂದು ಕೊಡುವಂತೆ ದೂರುದಾರರಿಗೆ ಪದೇ ಪದೇ ಫೋನ್ ಮಾಡಿದ್ದು, ಸದರಿ ಕಡತವನ್ನು ಪಿ.ಡಿ.ಓ. ಬಸವಯ್ಯರವರಿಗೆ ಕೊಡುವಂತೆ ತಿಳಿಸಿರುತ್ತಾರೆ.

ಡಿ) ದಿ.22/9/2015 ರಂದು ದೂರುದಾರರು ಎದುರುದಾರರ ಮನೆ ಬಳಿ ಬಂದು ವಿಚಾರಿಸಿದಾಗ, ಮಾರನೇ ದಿನ ಮಧ್ಯಾಹ್ನ ಗೌರಿಬಿದನೂರು ತಾಲ್ಲೂಕು ಪಂಚಾಯಿತಿ ಕಚೇರಿ ಬಳಿ ಬಂದು ನೋಡುವಂತೆ ತಿಳಿಸಿರುತ್ತಾರೆ.

ಇ) ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ, ದಿ.23/9/15 ರಂದು ಚಿಕ್ಕಬಳ್ಳಾಪುರ ಲೋಕಾಯುಕ್ತ ಪೊಲೀಸ್ ಠಾಣೆಗೆ ಹಾಜರಾಗಿ, ತನಿಖಾಧಿಕಾರಿಯ ಮುಂದೆ ಲಿಖಿತ ದೂರನ್ನು ಸಲ್ಲಿಸಿರುತ್ತಾರೆ. ಅದರಂತೆ ಸದರಿ ಪೊಲೀಸ್ ಠಾಣೆಯಲ್ಲಿ ಮೊ.ಸಂ.5/15 ರಂತೆ ಪಿ.ಸಿ.ಕಾಯಿದೆ ಕಲಂ 7,13(1)(ಡಿ) ಸಹ ಕಲಂ 13(2) ರಂತೆ ಎದುರುದಾರರಾದ ನಿಮ್ಮ ವಿರುದ್ಧ ಪ್ರ.ವ.ವರದಿ ದಾಖಲಾಗಿರುತ್ತದೆ.

ಎಫ್) ಅದೇದಿನ ಸಂಜೆ 5.00 ಗಂಟೆ ಸಮಯದಲ್ಲಿ ದೂರುದಾರರು ಖಲೀಲ್ ವರ್ಕ್‌ಶಾಪ್ ಬಳಿ ನಿಂತಿದ್ದಾಗ ದ್ವಿಚಕ್ರ ವಾಹನದಲ್ಲಿ ಪಿ.ಡಿ.ಓ.ರವರೊಂದಿಗೆ ಬಂದ ಎದುರುದಾರರು ದೂರುದಾರರಿಂದ ರೂ.3,000/- ಲಂಚದ ಹಣವನ್ನು ನೆರಳು ಸಾಕ್ಷಿ ಶ್ರೀ.ಜಿ.ಕಿರಣ್‌ಕುಮಾರ್ ಇವರ ಸಮಕ್ಷಮ ಪಡೆದಿರುತ್ತಾರೆ

ಜಿ) ಅದೇ ದಿವಸ ಸದರಿ ಲಂಚದ ಹಣವನ್ನು ಎದುರುದಾರರಿಂದ ಪಂಚನಾಮೆ ಮೂಲಕ ತನಿಖಾಧಿಕಾರಿ ವಶಪಡಿಸಿಕೊಂಡಿರುತ್ತಾರೆ.

ಹೆಚ್) ಎದುರುದಾರರನ್ನು ಅದೇ ಕಾರಣಕ್ಕಾಗಿ ದಸ್ತಗಿರಿ ಮಾಡಿರುತ್ತಾರೆ.

ಐ) ಸದರಿ ಹಣದ ಬಗ್ಗೆ ತನಿಖಾಧಿಕಾರಿಯು ಎದುರುದಾರರನ್ನು ವಿಚಾರಿಸಿದಾಗ ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ.

ಜೆ) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

3) ಆರೋಪ ಪಟ್ಟಿಯಲ್ಲಿ ಕಾಣಿಸಿರುವ ಸಂಗ್ರಹವಾದ ಆಧಾರಗಳಿಂದಾಗಿ 'ಎದುರುದಾರರು' ಅಧಿಕಾರ ಒಲವು ತೋರಲು ಲಂಚದ ಹಣಕ್ಕೆ ಒತ್ತಾಯ ಮಾಡಿ, ಸ್ವೀಕರಿಸಿದ್ದು, ಮೇಲ್ನೋಟಕ್ಕೆ 'ಎದುರುದಾರರ' ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರಿಯುವುದು ಅಗತ್ಯ ಎಂದು ಕಂಡುಬಂದಿದ್ದು, 'ಎದುರುದಾರರು' ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ.

4) ನಂತರ, ಎದುರುದಾರರಿಗೆ ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿ, ಅವರ ದುರ್ನಡತೆಯ ಬಗ್ಗೆ ಇಲಾಖಾ ವಿಚಾರಣೆ ಕೈಗೊಳ್ಳುವ ಸಂಬಂಧ, ಶಿಸ್ತು ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ವರದಿ ಕಳುಹಿಸಬಾರದು? ಎಂಬ ಬಗ್ಗೆ ಕಾರಣಗಳನ್ನು ಕೇಳಲಾಯಿತು. ಸಾಕಷ್ಟು ಕಾಲಾವಕಾಶ ನೀಡಿದಾಗ್ಯೂ 'ಎದುರುದಾರರು' ಪರಿವೀಕ್ಷಣಾ ಟಿಪ್ಪಣಿಗೆ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸದಿರುವುದರಿಂದ, ಸದರಿಯವರು ಆಕ್ಷೇಪಣೆ ಇಲ್ಲವೆಂದು ಪರಿಗಣಿಸಲಾಗಿದೆ.

5) ಡಿ.ಪಾಳ್ಯ ಗ್ರಾಮಪಂಚಾಯಿತಿಯು ಸರ್ಕಾರದ ನಿರ್ದೇಶನ ಹಾಗೂ ಶಾಸನಬದ್ಧ ಜವಾಬ್ದಾರಿಗಳನ್ನು ನಿರ್ವಹಿಸಲು ಅಸಮ್ಮತಿ ಸೂಚಿಸಿರುವ ಹಿನ್ನೆಲೆಯಲ್ಲಿ ಹಾಗೂ ಸರ್ಕಾರದ ನಿರ್ದೇಶನಗಳ ವಿರುದ್ಧ ನಿರ್ಣಯವನ್ನು ಕೈಗೊಂಡಿರುವುದು ನಿಯಮ ಬಾಹಿರವಾಗಿರುತ್ತದೆ. ಆದ್ದರಿಂದ, ಸದರಿ ಪಂಚಾಯಿತಿಯ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 268 ರ ನಿರೂಪಣೆಯಂತೆ "ಗ್ರಾಮಪಂಚಾಯಿತಿಯು ಅದರ ಅಧಿಕಾರವನ್ನು ಮೀರಿದರೆ ಅಥವಾ ಅದನ್ನು ದುರುಪಯೋಗ ಪಡಿಸಿದರೆ ಅಥವಾ ಈ ಅಧಿನಿಯಮದ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನ ಅಡಿಯಲ್ಲಿ ಅದಕ್ಕೆ ವಿಧಿಸಿದ ಕರ್ತವ್ಯಗಳನ್ನು ನೆರವೇರಿಸಲು ಸಕ್ಷಮವಾಗಿಲ್ಲದಿದ್ದರೆ ಅಥವಾ ಅವುಗಳನ್ನು

ನೆರವೇರಿಸುವುದರಲ್ಲಿ ಸತತವಾಗಿ ತಪ್ಪಿದಲ್ಲಿ ಜಿಲ್ಲಾ ಪಂಚಾಯಿತಿಯು, ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ಅಂತಹ ಗ್ರಾಮಪಂಚಾಯಿತಿಯನ್ನು ವಿಸರ್ಜಿಸಬಹುದು**"**.

6) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಡಿ.ಪಾಳ್ಯ ಗ್ರಾಮಪಂಚಾಯಿತಿಯ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 268 ಅಡಿಯಲ್ಲಿ ಸೂಕ್ತ ಕ್ರಮವನ್ನು ಕೈಗೊಳ್ಳುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ಇವರಿಗೆ ನಿರ್ದೇಶನ ನೀಡುವಂತೆ ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 19.2.18

**(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)**
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ, ಬೆಂಗಳೂರು.**